ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577007.

ಕಾಲೇಜು ಅಭಿವೃದ್ಧಿ ಪರಿಷತ್

ಸಂ:ದಾವಿವಿ/ಸಿಡಿಸಿ/ಸಂಯೋ–139/2026–27/3181 ದಿನಾಂಕ:27.10.2026

:ಅಧಿಸೂಚನೆ:

ವಿಷಯ : ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 2027–28ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ2024(ಭಾ–1), ದಿನಾಂಕ:06.10.2026

2. ಎಲ್ಲಾ ನಿಕಾಯದ ಡೀನರ ಸಮಿತಿ ಸಭೆಯ ನಿರ್ಣಯ ದಿನಾಂಕ:12.10.2026 & 16.10.2026

3. ಮಾನ್ಯ ಕುಲಪತಿಗಳವರ ಅನುಮೋದನೆ ದಿನಾಂಕ:23.10.2026

****

ವಿಶ್ವವಿದ್ಯಾನಿಲಯ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 2027–28ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 59 ರಿಂದ 62ರ ಹಾಗೂ ರಾಜ್ಯ ಶಿಕ್ಷಣ ನೀತಿಗೆ ಪೂರಕವಾಗಿ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ, ಆಡಳಿತ ನಿರ್ವಹಣೆ, ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಹಾಗೂ ಇನ್ನಾವುದೇ ಸಾಂಪ್ರದಾಯಿಕ ವಿಷಯಗಳಲ್ಲಿ ಪದವಿ ಕಾಲೇಜುಗಳನ್ನು ರಾಜ್ಯ ಸರ್ಕಾರದ/ ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಪ್ರಾರಂಭಿಸಲು ಆರ್ಥಿಕ ಸಾಮರ್ಥ್ಯವುಳ್ಳ ನೋಂದಾಯಿತ ಸೊಸೈಟಿ/ಸಾರ್ವಜನಿಕ ಟ್ರಸ್ಟ್/ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಕಾಲೇಜುಗಳು ತಮ್ಮ ಕಾಲೇಜುಗಳ ಮುಂದುವರಿಕೆ ಸಂಯೋಜನೆ; ನವೀನ ಶಾಶ್ವತ ಸಂಯೋಜನೆ; ಶಾಶ್ವತ ಸಂಯೋಜನೆ ಪರಿಶೀಲನೆ; ಶಾಶ್ವತ ಸಂಯೋಜನೆ ನವೀಕರಣ; ಹೊಸ ಪದವಿ; ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ನವೀನ ಸಂಯೋಜನೆ; ಹೊಸ ಐಚ್ಛಿಕ ವಿಷಯ ಸಮೂಹ; ಹೊಸ ಭಾಷಾ ವಿಷಯಗಳ ನವೀನ ಸಂಯೋಜನೆ; ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ; ಕಾಲೇಜಿನ ಹೆಸರು ಬದಲಾವಣೆ; ಕಾಲೇಜಿನ ಆಡಳಿತ ಮಂಡಳಿಯ ವರ್ಗಾವಣೆ; ಸ್ಥಳ ಬದಲಾವಣೆ; ಸಹ ಶಿಕ್ಷಣ ಕಾಲೇಜಾಗಿ ಪರಿವರ್ತಿಸಲು ಮುಂತಾದವುಗಳಿಗೆ ಸಂಬಂಧಿಸಿದಂತೆ 2027–28ನೇ ಶೈಕ್ಷಣಿಕ ವರ್ಷಕ್ಕಾಗಿ ಮೇಲಿನಂತೆ ವಿವಿಧ ಸಂಯೋಜನಾ ಪ್ರಸ್ತಾವನೆಗಳ ಅರ್ಜಿಗಳನ್ನು ಯುಯುಸಿಎಂಎಸ್ (ಅನ್‌ಲೈನ್) ಮೂಲಕ ಸಲ್ಲಿಸಬಹುದು.

2027–28ನೇ ಸಂಯೋಜನೆಗೆ ಸಂಬಂಧಿಸಿದ ಇತರೆ ಮಾಹಿತಿಗಳು ಹಾಗೂ ಸೂಚನೆಗಳು ಈ ಕೆಳಕಂಡಂತೆ ಇರುತ್ತವೆ.

1. ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ **ಸಂಖ್ಯೆ: ಇಡಿ 384 ಯು.ಎನ್.ಇ. 2020 ದಿನಾಂಕ: 18.02.2022**ರನ್ವಯ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ತಮ್ಮ ಜಮೀನು ಕುರಿತು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲು ಸೂಚಿಸಲಾಗಿದೆ.
   a) Not less than 0.5 acres if it is located in the Mega cities.
   b) 01 acre it is located in BMRDA, City Corporation and District head-quarters.
   c) 1.5 acres if it is located in Municipalities or Taluk head-quarters.
   d) 03 acres if it is in any other Rural areas.

ಕಾಲೇಜಿಗೆ ಸಂಬಂಧಿಸಿದ ಜಮೀನು ಆಯಾ ಸಂಸ್ಥೆ/ಸೋಸೈಟಿ ಅಥವಾ ಕಾಲೇಜಿನ ಹೆಸರಿನಲ್ಲಿಯೇ ಇದೆ ಎಂಬುದಕ್ಕೆ ದಾಖಲೆಗಳಾದ – ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ ಕಾರ್ಪೋರೇಷನ್‌ಗಳಿಂದ ಪಡೆದ ಇತ್ತೀಚಿನ ಖಾತಾ ನಕಲಿನ ದೃಢೀಕೃತ ಪ್ರತಿ ಅಥವಾ ಸದರಿ ಜಮೀನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್‌ರಿಜಿಸ್ಟ್ರರ್ ಕಛೇರಿಯಲ್ಲಿ ನೊಂದಾಯಿತವಾಗಿರುವ ಕ್ರಯಪತ್ರ ಅಥವಾ 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ ದಾನಪತ್ರವನ್ನು ಒದಗಿಸತಕ್ಕದ್ದು.

2. ಕಾಲೇಜಿನ ಯಾವುದೇ ವಿಧದ ಸಂಯೋಜನೆಗೆ ಸಂಬಂಧಿಸಿದಂತೆ, ಕಾಲೇಜುಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ **ಸರ್ಕಾರದ ಆದೇಶಾನುಸಾರ** ಕನಿಷ್ಠ ಸಂಯೋಜನಾ ಅಂಕಗಳು (Affiliation Marks) ಹಾಗೂ ಎಲ್ಲಾ 8 ಮಾನದಂಡಗಳನ್ನು (Defined Parameters) ಕಡ್ಡಾಯವಾಗಿ ಪೂರೈಸಬೇಕು.

3. ಕಾಲೇಜುಗಳ ಹೆಸರು ಬದಲಾವಣೆ, ಆಡಳಿತ ಮಂಡಳಿಯ ವರ್ಗಾವಣೆ, ಮಹಾವಿದ್ಯಾಲಯ/ ಮಹಾವಿದ್ಯಾಲಯಗಳ ಕೋರ್ಸ್‌ಗಳ ಸ್ಥಗಿತಗೊಳಿಸುವುದು, ಕಾಲೇಜಿನ ಸ್ಥಳಾಂತರದ ಅರ್ಜಿಗಳನ್ನು ಯುಯುಸಿಎಂಎಸ್ (ಆನ್‌ಲೈನ್) ಮೂಲಕವೇ ಸಲ್ಲಿಸುವುದು.

4. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಸಿ.ಎ/ಬಿ.ಬಿ.ಎ/ಬಿ.ಎಸ್‌ಡ್ಲೂ/ ಪದವಿ ಕೋರ್ಸ್‌ಗಳ ಪ್ರತಿ ಹೆಚ್ಚುವರಿ ವಿಭಾಗ ಮತ್ತು ಪ್ರತಿ ಐಚ್ಚಿಕ ವಿಷಯ ಸಮೂಹಕ್ಕೆ (ಒಂದು ವಿಭಾಗಕ್ಕೆ 01 ರಿಂದ 60 ಪ್ರವೇಶಮಿತಿ ನಿಗದಿಗೊಳಿಸಿದೆ) ನಿಗದಿತ ಶುಲ್ಕದೊಂದಿಗೆ ಹೆಚ್ಚುವರಿ ಶುಲ್ಕ ನಿಗದಿಪಡಿಸಲಾಗಿದ್ದು. **ಅನುಬಂಧ–01** ರಲ್ಲಿ ತಿಳಿಸಿರುವಂತೆ ವಿವಿಧ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸತಕ್ಕದ್ದು.

5. ಬಿ.ಸಿ.ಎ, ಬಿ.ಬಿ.ಎಂ/ಬಿ.ಬಿ.ಎ ಪದವಿ ಕೋರ್ಸ್‌ಗಳಿಗೆ ಸಂಯೋಜನೆ ಪಡೆದ/ಪಡೆಯಲು ಕಾಲೇಜಿನವರು ಕಡ್ಡಾಯವಾಗಿ AICTE ಸಂಸ್ಥೆ, ನವದೆಹಲಿ ಇವರಿಂದ ನಿಯಾಮಾನುಸಾರ ಅನುಮೋದನೆ ಪಡೆಯತಕ್ಕದ್ದು.

6. ಈ ಹಿಂದೆ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದಿರುವ ಕಾಲೇಜುಗಳು ಪ್ರಸಕ್ತ ಸಾಲಿನಲ್ಲಿ **ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಎ 2021, ಬೆಂಗಳೂರು, ದಿನಾಂಕ:12.02.2021**ರ ಆದೇಶಾನುಸಾರ, Score and Decision Criteria ನಲ್ಲಿ ನಿಗದಿಪಡಿಸಿದಂತೆ ಎಲ್ಲಾ 8 ಮಾನದಂಡಗಳನ್ನು (Defined Parameters) ಹಾಗೂ ಸಂಯೋಜನಾ ವಿಧಾನಗಳನುಸಾರ ಕನಿಷ್ಠ ಸಂಯೋಜನಾ ಅಂಕಗಳನ್ನು (Affiliation Marks) ಹೊಂದುವುದು ಕಡ್ಡಾಯವಾಗಿದೆ. ಒಂದು ವೇಳೆ ಹೊಂದಿಲ್ಲದಿದ್ದರೆ 02 ವರ್ಷಗಳ ನಂತರ ಅಂತಹ ಕಾಲೇಜಿನ ಕೋರ್ಸ್‌ಗಳ ಪ್ರಥಮ ವರ್ಷದ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಹಾಗೂ ತೃತೀಯ ಪದವಿ ವರ್ಷದ ವಿದ್ಯಾರ್ಥಿಗಳು, ತಮ್ಮ ಅಂತಿಮ ವರ್ಷದ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಕಾಲೇಜುಗಳನ್ನು ನಡೆಸಲು ಅವಕಾಶ ನೀಡಿ, ನಂತರ ಆ ಕಾಲೇಜುಗಳ ಸಂಯೋಜನೆಯನ್ನು ವಿಶ್ವವಿದ್ಯಾನಿಲಯದ ಸಂಯೋಜನಾ ನಿಯಮಗಳನುಸಾರ ಸಂಪೂರ್ಣವಾಗಿ ರದ್ದುಪಡಿಸಲಾಗುವುದು.

7. ಬಿ.ಇಡಿ.,/ಬಿ.ಪಿ.ಇಡಿ., ಅಥವಾ ಇತರೆ ವೃತ್ತಿಪರ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಸ್ಥೆಗಳು, ಸಂಯೋಜನಾ ಅರ್ಜಿ ಸಲ್ಲಿಸುವ ಮೊದಲು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತಿನ (NCTE) ಅಥವಾ ಸಂಬಂಧಿಸಿದ ಇತರೆ ಸಕ್ಷಮ ಪ್ರಾಧಿಕಾರಗಳ ಪೂರ್ವಾನುಮೋದನೆಯನ್ನು ಕಡ್ಡಾಯವಾಗಿ ಪಡೆದಿರಬೇಕು. ಹಾಗು ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿರಬೇಕು.

8. ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ಕೋರ್ಸ್ ಪ್ರಾರಂಭಿಸುವವರು AICTE ಸಂಸ್ಥೆಯಿಂದ ಮನ್ನಣೆ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಂಡು ಅರ್ಜಿಯನ್ನು ಸಲ್ಲಿಸಬೇಕು.

9. ಸಂಯೋಜಿತ ಕಾಲೇಜುಗಳು ಸಂಯೋಜನಾ ಅರ್ಜಿಯನ್ನು ಸಲ್ಲಿಸುವಾಗ ವಿಶ್ವವಿದ್ಯಾನಿಲಯದ ಅನುಮೋದನೆಗೊಂಡಿರುವ ಪದವಿ ಕೋರ್ಸು/ವಿಷಯ/ಐಚ್ಛಿಕ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
10. ಐದು (05) ವರ್ಷಗಳ ನಿರಂತರ ತಾತ್ಕಾಲಿಕ ಸಂಯೋಜನೆಯನ್ನು ಪಡೆದಿರುವ ಕಾಲೇಜುಗಳು ಪ್ರಸ್ತುತ ಅಸ್ತಿತ್ವದಲ್ಲಿರುವ ಕೋರ್ಸು/ವಿಷಯಗಳಿಗೆ ಸ್ಥಳೀಯ ತಪಾಸಣಾ ಸಮಿತಿ ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿ, ವಿಶ್ವವಿದ್ಯಾನಿಲಯ ಮತ್ತು ಯುಜಿಸಿ ವತಿಯಿಂದ ಕಾಲ-ಕಾಲಕ್ಕೆ ನಿಗದಿಪಡಿಸುವ ಶೈಕ್ಷಣಿಕ ಗುಣಮಟ್ಟ ಮತ್ತು ಮಾನ್ಯತೆ ಹೊಂದಿದ್ದಲ್ಲಿ ಅಂತಹ ಕಾಲೇಜುಗಳು ಶಾಶ್ವತ ಸಂಯೋಜನೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಬಹುದು.
11. ಸಂಯೋಜನೆಗೆ ಅರ್ಜಿ ಸಲ್ಲಿಸುವ ಕಾಲೇಜು, ತರಗತಿ, ಆಡಳಿತ ಕಾರ್ಯಾಲಯ, ಗ್ರಂಥಾಲಯ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಮಹಿಳೆಯರ ವಿಶ್ರಾಂತಿ ಕೊಠಡಿ ಸೇರಿದಂತೆ ಮಹಾವಿದ್ಯಾಲಯವನ್ನು ನಡೆಸಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಕಟ್ಟಡವನ್ನು ಹೊಂದಿರತಕ್ಕದ್ದು ಮುಂದುವರೆದು, ಹೊಸದಾಗಿ ಪ್ರಾರಂಭಿಸಲು ಇಚ್ಛಿಸಿರುವ ಕೋರ್ಸ್‌ಗಳಿಗೆ ಅನುಗುಣವಾಗಿ ವಿಜ್ಞಾನ/ಗಣಕಯಂತ್ರ, ಪೀಠೋಪಕರಣಗಳು ಸೇರಿದಂತೆ ಅಗತ್ಯವಾದ ಪ್ರಯೋಗಾಲಯಗಳ ವ್ಯವಸ್ಥೆ ಹೊಂದಿರಬೇಕು ಹಾಗೂ ಪಠ್ಯಕ್ರಮದನ್ವಯ ಪ್ರಯೋಗಾಲಯಗಳ ಸಿದ್ಧತೆ ಮಾಡಿಕೊಂಡಿರಬೇಕು.
12. ಕಾಲೇಜು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಪದವಿ ಕೋರ್ಸಿಗೆ, ಸಂಬಂಧಿಸಿದ ವಿಷಯದಲ್ಲಿ ಯು.ಜಿ.ಸಿ/ ಸರ್ಕಾರಿ ನಿಯಮಾವಳಿಯನ್ವಯ ಕನಿಷ್ಠ ನಾಲ್ವರು ಅಧ್ಯಾಪಕರನ್ನು ಹೊಂದಿದ್ದು, ಅಲ್ಲದೆ, ಅವರಲ್ಲಿ ಇಬ್ಬರು Ph.D., ಪದವಿ ಹೊಂದಿದವರಾಗಿಬೇಕು. ಅವರುಗಳಿಗೆ ಸ್ನಾತಕೋತ್ತರ ವಿಷಯ ಬೋಧನೆಗೆ ಆದೇಶ ನೀಡಿರಬೇಕು.

ಸದರಿ ಅಧ್ಯಾಪಕರನ್ನು ಸ್ನಾತಕ ಪದವಿ ತರಗತಿಗಳಿಗೆ ಬೋಧನೆಗೆ ಅವಕಾಶ ನೀಡಿರಬಾರದು.

ಸ್ನಾತಕೋತ್ತರ ವ್ಯಾಸಂಗದ ಜೊತೆಗೆ ಸಂಶೋಧನಾ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ಮಾರ್ಗಸೂಚಿಯನ್ವಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು. ಅಂತಹ ಸೌಲಭ್ಯವುಳ್ಳ ಕಾಲೇಜುಗಳು 2027-28ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪ್ರಾರಂಭಿಸಲು ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

13. ಹೊಸ ಕಾಲೇಜು ಪ್ರಾರಂಭಿಸಲು ಹಾಗೂ ನವೀನ ಸಂಯೋಜನೆಗಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವ ನೋಂದಾಯಿತ ಸಂಘ ಸಂಸ್ಥೆಗಳು ಅರ್ಜಿಯೊಡನೆ ಈ ಕೆಳಕಂಡ ದಾಖಲಾತಿಗಳನ್ನು ತಪ್ಪದೆ ಲಗತ್ತಿಸತಕ್ಕದ್ದು.

13.1. ವಿದ್ಯಾಸಂಸ್ಥೆಯ ನೋಂದಣಿ ಪತ್ರದ ದೃಢೀಕೃತ ಪ್ರತಿ.

13.2. ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ.

13.3. ಟ್ರಸ್ಟ್ ಆಗಿದ್ದರೆ ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ.

13.4. ಸೊಸೈಟಿ/ಟ್ರಸ್ಟ್ ಲೆಕ್ಕಗಳ ಆಡಿಟ್ ವರದಿಯ ಪ್ರತಿ. (ಕನಿಷ್ಠ ಕಳೆದ ಮೂರು ವರ್ಷಗಳದ್ದು)

13.5. ಕಾಲೇಜಿನ ಲೆಕ್ಕಗಳ ಆಡಿಟ್ (Audit) ವರದಿ ಪ್ರತಿ.

13.6. ಹಿಂದಿನ ವರ್ಷದ ವಾರ್ಷಿಕ ವರದಿ (Annual Report) ಪ್ರತಿ.

13.7. ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ನಿಗದಿಪಡಿಸಿರುವ ಸ್ಥಳ ಮತ್ತು ಅದರ ಸೂಕ್ತತೆ ವಿವಾದ ಮುಕ್ತವಾಗಿರುವ ಬಗೆಗೆ ಅಫಿಡಾವಿಟ್ ಸಲ್ಲಿಸುವುದು.

13.8. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣಪತ್ರ.

13.9. ಕಾಲಕಾಲಕ್ಕೆ ರಚಿಸಿರುವ/ ರಚಿಸಲಾಗುವ ವಿಶ್ವವಿದ್ಯಾಲಯದ ಅಧಿನಿಯಮ(Act) ಪರಿನಿಯಮ/ ಶಾಸನ (Statute); ನಿಬಂಧನೆ (Regulations); ಆಧ್ಯಾದೇಶ (Ordinance); ನಿಯಮ (Rule) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಅಫಿಡಾವಿಟ್ ಪತ್ರವನ್ನು (Undertaking) **ರೂ.200=00** ಛಾಪ ಕಾಗದದಲ್ಲಿ ಮುದ್ರಿಸಿ ನೋಟರಿಯವರಿಂದ ದೃಢೀಕರಿಸಿ ಅರ್ಜಿಯೊಡನೆ ಲಗತ್ತಿಸುವುದು.

13.10. ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ಕಟ್ಟಡಗಳ ಸಧೃಡತೆ/ಸುರಕ್ಷತೆ ಕುರಿತು ಸರಕಾರದ ಸುತ್ತೋಲೆ **ಸಂಖ್ಯೆ:ಇಡಿ 218 ಯುಎನ್‌ಇ 2020 ದಿನಾಂಕ:28.08.2020**ರಲ್ಲಿ ನಿರ್ದೇಶಿಸಿರುವಂತೆ ಕಡ್ಡಾಯವಾಗಿ National Building Code-2016ರ ನಿಯಮಾನುಸಾರ ಹಾಗೂ ಸರ್ಕಾರದ ನಿರ್ದೇಶಾನುಸಾರ ಲೋಕೋಪಯೋಗಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಅಗ್ನಿ ಶಾಮಕ ಮತ್ತು ತುರ್ತು ಸೇವಾ ಇಲಾಖೆ ಯಿಂದ (Fire Safety Compliance Certificates) ಧೃಢೀಕರಣ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

13.11. ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ನವೀನ ಕಾಲೇಜು ಪ್ರಾರಂಭಿಸಲು ಇಚ್ಚಿಸುವ ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ಜಮೀನನ ಕುರಿತು ಕ್ರ.ಸಂ:01ರಲ್ಲಿ ತಿಳಿಸಿರುವ ಮಾನದಂಡಗಳನ್ನು ಅನುಸರಿಸತಕ್ಕದ್ದು.

13.12. ಪ್ರಸ್ತುತ ವರ್ಷ ಪ್ರಾರಂಭಿಸಬೇಕಾದ ಮಂಜೂರಾತಿಯಾದ ಕಾಲೇಜನ್ನು ಅಡಳಿತಾತ್ಮಕ ಕಾರಣಗಳಿಂದಾಗಿ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಅಥವಾ ಹೊಸ ಸಂಯೋಜನೆ ಮಂಜೂರಾತಿಯು ತಾಂತ್ರಿಕ ಕಾರಣಗಳಿಂದಾಗಿ ಸರ್ಕಾರದ ಮಟ್ಟದಲ್ಲಿ ವಿಳಂಬವಾದಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ ಕಾಲೇಜಿನವರು ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದ ಇತರೆ ಶುಲ್ಕಗಳೊಂದಿಗೆ ಕೋರ್ಸಿನ ಮುಂದುವರಿಕೆ/ವಿಸ್ತರಣೆ ಶುಲ್ಕಗಳನ್ನು ಯಥಾವತ್ತಾಗಿ ನಿಗದಿಯಂತೆ ಭರಿಸಬೇಕಾಗುತ್ತದೆ.

14. ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜು ಕಡ್ಡಾಯವಾಗಿ ಹೊಂದಿರಲೇಬೇಕಾದ ಮೂಲಭೂತ ಸೌಲಭ್ಯಗಳನ್ನು (Defined Parameters) ಖಚಿತಪಡಿಸಿಕೊಂಡು, ಇತರೆ ಸೌಲಭ್ಯಗಳ ಕೊರತೆಯನ್ನು ಪೂರೈಸಲು ಷರತ್ತುಗಳನ್ನು ವಿಧಿಸಿ, ಸದರಿ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿದ್ದಲ್ಲಿ, ಅಂತಹ ಕಾಲೇಜಿನ/ಆಡಳಿತ ಮಂಡಳಿಯವರು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಅವಧಿಯೊಳಗೆ ವರದಿ ಸಲ್ಲಿಸುವುದು.

15. **ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು, ಸರ್ಕಾರದ/ಸಾರ್ವಜನಿಕ ಶಿಕ್ಷಣ ಇಲಾಖೆಯ ಪೂರ್ವಾನುಮತಿಯನ್ನು ಪಡೆಯದ ಹೊರತು ಯಾವುದೇ ಹೊಸ ಕೋರ್ಸ್/ ಭಾಷಾ ವಿಷಯ/ ಹೆಚ್ಚುವರಿ ಪ್ರವೇಶಾತಿ ಸಂಖ್ಯೆ ಹಾಗೂ ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸುವಂತಿಲ್ಲ.**

ಸರ್ಕಾರದ ಅನುಮತಿ ಇಲ್ಲದೆ ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಮುಂದುವರಿಕೆ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವಾಗ ಪ್ರಸ್ತುತ ಮಂಜೂರಾಗಿರುವ ಕೋರ್ಸು, ಭಾಷಾ ವಿಷಯ, ಐಚ್ಛಿಕ ವಿಷಯ ಸಮೂಹ ಹಾಗೂ ಪ್ರವೇಶ ಮಿತಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಅರ್ಜಿಯಲ್ಲಿ ನಮೂದಿಸಬೇಕು.

ಸರ್ಕಾರಿ ಕಾಲೇಜಿನವರು, ಹೊಸದಾಗಿ ಕೋರ್ಸ್, ವಿಷಯಗಳ ಸಮೂಹ ಇತ್ಯಾದಿ ಹೊಸ ಸಂಯೋಜನೆಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಆರಂಭಿಸಲು ಇಚ್ಚಿಸಿರುವ ಶೈಕ್ಷಣಿಕ ಸಾಲಿಗೆ ಅವಶ್ಯಕವಿರುವ ಹೊಸ ಸಂಯೋಜನೆಗಳ ಮಾಹಿತಿ, ಅವುಗಳ ಅಗತ್ಯತೆ ಮತ್ತು ಮಹಾವಿದ್ಯಾಲಯದಲ್ಲಿ ಹೊಸ ಸಂಯೋಜನೆಗಳಿಗೆ ಲಭ್ಯವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ತಾವು ಸಲ್ಲಿಸಿದ ಮನವಿ ಪತ್ರ ಹಾಗೂ **ಸರ್ಕಾರವು ನೀಡಿರುವ ಅನುಮೋದನೆ ಪತ್ರದ** ಪ್ರತಿಗಳನ್ನು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

16. **ಸರ್ಕಾರದ ಆದೇಶ ಸಂಖ್ಯೆ:ಇಡಿ 166 ಯುಎನ್‌ಇ 2023, ದಿನಾಂಕ:08.05.2024ರ** ಪ್ರಕಾರ 2024–25ರ ಶೈಕ್ಷಣಿಕ ವರ್ಷದಿಂದ ಕರ್ನಾಟಕ ರಾಜ್ಯ ಶೈಕ್ಷಣಿಕ ನೀತಿಯನ್ನು ಅನುಷ್ಠಾನಗೊಳಿಸಲಾಗಿದ್ದು, 2021–2022ನೇ ಶೈಕ್ಷಣಿಕ ವರ್ಷಕ್ಕಿಂತ ಮುಂಚೆ ಇದ್ದಂತೆ, ಬಿ.ಎ., ಮತ್ತು ಬಿ.ಎಸ್ಸಿ., ಪದವಿಗಳಿಗೆ ಮೂರು(03) ಮೇಜರ್ ವಿಷಯ ಸಮೂಹಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯದಿಂದ ಯು.ಯು.ಸಿ.ಎಂ.ಎಸ್. ಆನ್‌ಲೈನ್ ತಂತ್ರಾಂಶದಲ್ಲಿ ಪ್ರವೇಶಮಿತಿ ಅನುಮೋದನೆ ಪಡೆಯಲು ಸೂಚಿಸಿದೆ ಹಾಗೂ ಆ ಪ್ರಕಾರವಾಗಿಯೇ ಸಂಯೋಜನೆ ಪ್ರಕ್ರಿಯೆ ನಡೆಸಲಾಗುವುದು.

17. ಕರ್ನಾಟಕ ರಾಜ್ಯ **ಸರ್ಕಾರದ ಆದೇಶ ಸಂಖ್ಯೆ:ಇಡಿ 21 ಯುಬಿವಿ 2004, ದಿನಾಂಕ:15.05.2004ರನ್ವಯ** ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ಸಂಯೋಜನಾ ಶೀರ್ಷಿಕೆಯಡಿ ನಿಗದಿಯಾದ ಶುಲ್ಕದಲ್ಲಿ ಶೇಕಡಾ 50%ರಷ್ಟು ಮಾತ್ರ ಪಾವತಿಸಬಹುದಾಗಿದೆ (ಅಭಿವೃದ್ಧಿ ಮತ್ತು ಸಂಯೋಜನಾ ಪ್ರಕ್ರಿಯೆಗಳ ಶುಲ್ಕವನ್ನು ಪೂರ್ಣವಾಗಿ ಪಾವತಿಸತಕ್ಕದ್ದು). ಸದರಿ ವಿನಾಯಿತಿ ಪಡೆಯಲು, ಅದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿಗಳೆಂದು ಪರಿಗಣಿಸಲಾಗುವುದಿಲ್ಲ. ಅಂತಹ ಆಡಳಿತ ಮಂಡಳಿಯ/ ಕಾಲೇಜುಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ನೀಡಲಾಗುವುದಿಲ್ಲ.

18. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ರೆಡ್‌ಕ್ರಾಸ್ ಘಟಕವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

19. ವಿಶ್ವವಿದ್ಯಾಲಯ ನಿಗದಿಪಡಿಸಿದ ಎಲ್ಲಾ ಘಟಕಗಳನ್ನು ರಚಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ, ಘಟಕಗಳ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಕುರಿತಾಗಿ ದಾಖಲೆಗಳನ್ನು ಸರಿಯಾಗಿ ಕಾಯ್ದುಕೊಳ್ಳತಕ್ಕದ್ದು ಹಾಗೂ ಎಲ್ಲಾ ಸ್ಥಳಿಯಾ ತಪಾಸಣಾ ಸಮಿತಿಯು ಕೇಳಿದಾಗ ಹಾಜರುಪಡಿಸುವುದು.

20. ವಿಶ್ವವಿದ್ಯಾನಿಲಯದ ಸಂಯೋಜಿತ ಎಲ್ಲಾ ಸರ್ಕಾರಿ/ ಖಾಸಗಿ ಕಾಲೇಜಿನ ಕಟ್ಟಡಗಳ ಸಧೃಡತೆ/ ಸುರಕ್ಷತೆ ಕುರಿತು **ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 218 ಯುಎನ್‌ಇ 2020 ದಿನಾಂಕ:28.08.2020**ರಲ್ಲಿ ನಿರ್ದೇಶಿಸಿರುವಂತೆ ಕಡ್ಡಾಯವಾಗಿ National Building Code-2016ರ ನಿಯಮಾನುಸಾರ ಹಾಗೂ ಸರ್ಕಾರದ ನಿರ್ದೇಶಾನುಸಾರ, ಲೋಕೋಪಯೋಗಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಅಗ್ನಿ ಶಾಮಕ ಮತ್ತು ತುರ್ತು ಸೇವಾ ಇಲಾಖೆ ಯಿಂದ (Fire Safety Compliance Certificates) ಧೃಢೀಕರಣ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

21. 2026–27ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸಿ, ಶಾಶ್ವತ ಸಂಯೋಜನೆ ಪಡೆಯದೇ ಇರುವ ಕಾಲೇಜುಗಳವರು 2027–28ನೇ ಸಾಲಿನಲ್ಲಿ ಶಾಶ್ವತ ಸಂಯೋಜನೆ ಅರ್ಜಿ ಸಲ್ಲಿಸಬಹುದಾಗಿದೆ.

22. ಸಂಯೋಜನಾ ಅರ್ಜಿಯಲ್ಲಿ ನಮೂದಿಸಿರುವ ಕೋರ್ಸು, ಐಚ್ಛಿಕ ವಿಷಯ ಮತ್ತು ಭಾಷಾ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳಿಗಾಗಿ ಸ್ಥಳೀಯ ತಪಾಸಣಾ ಸಮಿತಿ ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಅಥವಾ ನಂತರದ ಸಂದರ್ಭದಲ್ಲಿ ಸಲ್ಲಿಸುವ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

23. ಯು.ಜಿ.ಸಿ./ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯದ ಸಂಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು/ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

24. ಸಂಯೋಜನೆಯ ವಿಧಕ್ಕೆ ಅನುಗುಣವಾಗಿ ಹೊಂದಬೇಕಾದ ಅಂಕಗಳನ್ನು ಹಾಗೂ ಮಾನದಂಡಗಳನ್ನು ಹೊಂದಿರತಕ್ಕದ್ದು.

25. ವಿಶ್ವವಿದ್ಯಾಲಯ ಪಠ್ಯಕ್ರಮ ರಚಿಸಿರುವ ಕೋರ್ಸ್/ ವಿಷಯಗಳಿಗೆ ಮಾತ್ರ ಸಂಯೋಜನೆಗೆ ಅರ್ಜಿ ಸಲ್ಲಿಸುವುದು.

26. ಮಾನ್ಯತೆ ಇಲ್ಲದ ಕೋರ್ಸ್/ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಶುಲ್ಕವನ್ನು ಮರುಪಾವತಿ/ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

27. ಸಂಯೋಜನೆಗಾಗಿ ಭರಿಸಿದ ಎಲ್ಲಾ ಶುಲ್ಕಗಳ ಮೂಲ ಪ್ರತಿಗಳನ್ನು **ಕಾಲೇಜಿನ ಹೆಸರು ನಮೂದಿಸಿ** ಅರ್ಜಿಗಳೊಂದಿಗೆ ಲಗತ್ತಿಸಿ ಸಲ್ಲಿಸುವುದು. ಒಂದು ವೇಳೆ ನಿಗದಿತ ದಿನಾಂಕದೊಳಗಾಗಿ ಸಂಯೋಜನೆಗಾಗಿ ಭರಿಸಬೇಕಾದ ಶುಲ್ಕಗಳ ಪ್ರತಿಯನ್ನು ತಮ್ಮಲ್ಲಿಯೇ ಇಟ್ಟುಕೊಂಡು, ನಿಗದಿತ ದಿನಾಂಕದ ನಂತರ ಅರ್ಜಿಗಳೊಂದಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

28. ಮುಂದುವರೆದು, ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ. ಅಲ್ಲದೇ, ಕಣ್ತಪ್ಪಿನಿಂದ ಒಂದು ಕೋರ್ಸ್‌ಗೆ ಭರಿಸಬೇಕಾದ ಮೊತ್ತವನ್ನು ಮತ್ತೊಂದು ಕೋರ್ಸ್‌ಗೆ ಭರಿಸಿದಲ್ಲಿ ಅಂತಹ ಮೊತ್ತವನ್ನು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

29. ನಿಗದಿತ ಸಂಯೋಜನಾ ಅರ್ಜಿ ಶುಲ್ಕ ರೂ.**5,500=00(ರೂಪಾಯಿ ಐದು ಸಾವಿರದ ಐದುನೂರು ಮಾತ್ರ)**ಗಳನ್ನು ಮತ್ತು ಸಂಬಂಧಪಟ್ಟ ಸಂಯೋಜನಾ ಶುಲ್ಕಗಳನ್ನು NEFT/RTGS/Through Challan ಮೂಲಕ ಸಂಯೋಜನಾ ಖಾತೆ ಸಂಖ್ಯೆ:**64050645885**ಗೆ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ವಿಶ್ವವಿದ್ಯಾನಿಲಯ ಕ್ಯಾಂಪಸ್, ಶಿವಗಂಗೋತ್ರಿ, ದಾವಣಗೆರೆ–577 007 (IFSC Code No.SBIN0040869)** ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ.

30. ಸಂಯೋಜನೆಗೆ ಅರ್ಜಿ ಸಲ್ಲಿಸುವ ವೆಬ್‌ಸೈಟ್ ಲಿಂಕ್ ವಿಳಾಸ:**https://uucms.karnataka.gov.in/Login/Index** ಭರ್ತಿ ಮಾಡಿದ ಅನ್‌ಲೈನ್ ಅರ್ಜಿಯ ಎರಡು ಹಾರ್ಡ್ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577007 ಇವರ ಕಛೇರಿಗೆ ಸಲ್ಲಿಸತಕ್ಕದ್ದು.

31. ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ದಿನಾಂಕಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ	:	**28.10.2026**
2. ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	:	**15.11.2026**
3. ರೂ.10,000=00 ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ (ಅರ್ಜಿ ಸಲ್ಲಿಸಲು ಹಾಗೂ ಪೂರ್ಣ ಸಂಯೋಜನಾ ಶುಲ್ಕ ಪಾವತಿಸಲು)	:	**16.11.2026 ರಿಂದ 21.11.2026**

32. ಮೇಲ್ಕಂಡ ದಿನಾಂಕಗಳ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

33. ಸಂಯೋಜನಾ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ **http://davangereuniversity.ac.in**. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರನ್ನು ವಿಶ್ವವಿದ್ಯಾನಿಲಯದ ಕಛೇರಿ ವೇಳೆಯಲ್ಲಿ ಭೇಟಿ ಮಾಡಬಹುದಾಗಿದೆ.

34. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜು 2027–28 ಶೈಕ್ಷಣಿಕ ವರ್ಷದಿಂದ ರದ್ದತಿ ಬಯಸಿದಲ್ಲಿ ನಿಗದಿತ ಶುಲ್ಕವನ್ನು ಪಾವತಿಸಿ ಸದರಿ ಅಧಿಸೂಚನೆಯಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

35. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ ಹಾಗೂ ಸರ್ಕಾರದ ಆದೇಶಗಳಂತೆ, ಸದರಿ ಸಂಯೋಜನಾ ಅಧಿಸೂಚನೆ ಹಾಗೂ ಇದರಲ್ಲಿನ ಸೂಚನೆಗಳು, ಮಾರ್ಗಸೂಚಿಗಳು, ನಿಯಮಾವಳಿಗಳಲ್ಲಿ ಮುದ್ರಣ ದೋಷಗಳುಂಟಾಗಿದ್ದಲ್ಲಿ ಅಥವಾ ಅರ್ಥೈಸುವಲ್ಲಿ ವ್ಯತ್ಯಾಸಗಳಾಗಿದ್ದರೆ, ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಹಂತದಲ್ಲಿ ತಿದ್ದುಪಡಿಗಳಿಗೆ ಒಳಗಾಗುವ ಷರತ್ತಿಗೆ ಒಳಪಟ್ಟಿರುತ್ತದೆ.

ಷರಾ:

1. ಕಳೆದ ಮೂರು ಶೈಕ್ಷಣಿಕ ವರ್ಷಗಳ ಅವಧಿಯ ಸಂಯೋಜನಾ ಆದೇಶ ಮತ್ತು LIC ವರದಿಗಳನ್ನು ಅರ್ಜಿ ಜೊತೆಯಲ್ಲಿ ಕಡ್ಡಾಯವಾಗಿ ಲಗತ್ತಿಸಿರಬೇಕು.
2. ಕಾಲೇಜಿನ ನ್ಯಾಕ್ ಮಾನ್ಯತೆ, ಯುಜಿಸಿ ಕಾಯ್ದೆಯ ಸೆಕ್ಷನ್ 2(f), 12(B)ರಡಿಯಲ್ಲಿ ಮಾನ್ಯತೆ ಹೊಂದಿದ ಪ್ರಮಾಣ ಪತ್ರಗಳು ಇದ್ದಲ್ಲಿ, ಅರ್ಜಿ ಜೊತೆಯಲ್ಲಿ ಕಡ್ಡಾಯವಾಗಿ ಲಗತ್ತಿಸಿರಬೇಕು.
3. ಕಾಲೇಜಿನ ಶಾಶ್ವತ ಸಂಯೋಜನೆಗೆ (Permanent Affiliation) ಅರ್ಜಿ ಸಲ್ಲಿಸುವಾಗ, ಕಳೆದ ಐದು ಶೈಕ್ಷಣಿಕ ವರ್ಷಗಳ ಅವಧಿಯ ಸಂಯೋಜನಾ ಆದೇಶ ಮತ್ತು LIC ವರದಿಗಳನ್ನು ಅರ್ಜಿ ಜೊತೆಯಲ್ಲಿ ಕಡ್ಡಾಯವಾಗಿ ಲಗತ್ತಿಸಿರಬೇಕು.
4. ಶಾಶ್ವತ ಸಂಯೋಜನೆಯ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಈ ಹಿಂದೆ ಸರ್ಕಾರದಿಂದ ಪಡೆದ ಶಾಶ್ವತ ಸಂಯೋಜನೆ ಆದೇಶದ ಪ್ರತಿಯನ್ನು ಲಗತ್ತಿಸುವುದು.
5. **ಎಐಸಿಟಿಇ ಹಾಗೂ ಎನ್‌ಸಿಟಿಇ** ಪ್ರಾಧಿಕಾರಗಳ ಅನುಮೋದನೆಯನ್ನು ಪಡೆಯುವ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅನುಮೋದನೆಯನ್ನು ಬಾಕಿ ಇರಿಸಿ ಯುಯುಸಿಎಂಎಸ್‌ನಲ್ಲಿ ಸಂಯೋಜನಾ ಅರ್ಜಿಗಳನ್ನು ಸಲ್ಲಿಸುವುದು. ಸರ್ಕಾರ ನಿಗದಿಪಡಿಸಿದ ಅವಧಿಯೊಳಗೆ ಸದರಿ ಪ್ರಾಧಿಕಾರಗಳಿಂದ ಪಡೆದ ಅನುಮೋದನೆ ಪತ್ರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಆದೇಶಾನುಸಾರ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ/ಸಂಯೋಜನಾಧಿಕಾರಿಗಳಿಗೆ.

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಕರ್ನಾಟಕ ಸರ್ಕಾರ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು
2. ಆಯುಕ್ತರು / ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ, ಸಹ್ಯಾದ್ರಿ ಕಾಲೇಜು ಆವರಣ, ವಿದ್ಯಾನಗರ, ಶಿವಮೊಗ್ಗ-577203
4. ವಲಯದ ನಿರ್ದೇಶಕರು, ಆಕಾಶವಾಣಿ, ಭದ್ರಾವತಿ/ಚಿತ್ರದುರ್ಗ – ಈ ಪ್ರಕಟಣೆಯ ಸಾರಾಂಶವನ್ನು ಸುದ್ದಿರೂಪದಲ್ಲಿ ಬಿತ್ತರಿಸಲು ಕೋರಲಾಗಿದೆ.
5. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ / ಚಿತ್ರದುರ್ಗ ಜಿಲ್ಲೆ – ಈ ಪ್ರಕಟಣೆಯ ಸಾರಾಂಶವನ್ನು ಸುದ್ದಿರೂಪದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ/ಮೈಸೂರು ವಿಶ್ವವಿದ್ಯಾನಿಲಯ/ಮಂಗಳೂರು ವಿಶ್ವವಿದ್ಯಾನಿಲಯ/ ತುಮಕೂರು ವಿಶ್ವವಿದ್ಯಾನಿಲಯ/ ಬೆಂಗಳೂರು ವಿಶ್ವವಿದ್ಯಾನಿಲಯ/ ಕರ್ನಾಟಕ ವಿಶ್ವವಿದ್ಯಾನಿಲಯ/ ಗುಲ್ಬರ್ಗಾ ವಿಶ್ವವಿದ್ಯಾನಿಲಯ/ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ/ ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ/ ಕನ್ನಡ ವಿಶ್ವವಿದ್ಯಾನಿಲಯ.
7. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪ)/ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577007.
8. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577007
9. ಕಛೇರಿ ಪ್ರತಿ.